# ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ




ಸಂಪಾದಕರು

ಡಾ. ವಿದ್ಯಾವತಿ ರಜಪೂತ

ಡಾ. ಎಸ್. ಟಿ. ಮೇರವಾಡೆ

ಡಾ. ಆರ್. ವಿ. ಪಾಟೀಲ

# ಪರಿವಿಡಿ


೧. ಪತ್ರಿಕೆಗಳ ಸ್ಥಿತಿ-ಗತಿ ೧
- ಡಾ. ಬಸವರಾಜ ಜಗಜಂಪಿ

೨. ರಾಷ್ಟ್ರೀಯತೆ ಮತ್ತು ಪಂಡಿತ ದೀನದಯಾಳ ಉಪಾಧ್ಯಾಯ ೪
- ಡಾ. ಎಸ್. ಟಿ. ಮೇರವಾಡೆ

೩. ಮಾಧ್ಯಮಲೋಕ ೯
- ಡಾ. ವಿ. ಎಸ್. ಮಾಳಿ

೪. ಹಿಂದಿ ಪತ್ರಿಕೋದ್ಯಮ : ಪಂ. ದೀನದಯಾಳ ಉಪಾಧ್ಯಾಯ ೧೨
- ಡಾ. ವಿದ್ಯಾವತಿ ಜಿ. ರಜಪೂತ

೫. ಕನ್ನಡ ಸಾಹಿತ್ಯ – ಮುದ್ರಣ ಹಾಗೂ ಮಾಧ್ಯಮಗಳು ೧೪
- ಡಾ. ಜಿನದತ್ತ ಅ. ಹಡಗಲಿ

೬. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ ೧೭
- ಪ್ರೊ. ಬಿ. ಬಿ. ಡೆಂಗನವರ

೭. ಸ್ವಾಮಿ ವಿವೇಕಾನಂದರ ಉಪನ್ಯಾಸಗಳು ಹಾಗೂ ರಾಷ್ಟ್ರಧರ್ಮ ೨೫
- ಡಾ. ಆರ್. ವಿ. ಪಾಟೀಲ

೮. ಸುಭದ್ರಾಕುಮಾರಿ ಚೌಹಾನ ಅವರ ಕಾವ್ಯದಲ್ಲಿ ರಾಷ್ಟ್ರೀಯತೆ ೩೮
- ಡಾ. ಎಸ್. ಜೆ. ಜಹಾಗೀರದಾರ

೯. ಬಸವರಾಜ ಕಟ್ಟೀಮನಿಯವರ ಕಥೆಗಳು ಮತ್ತು ರಾಷ್ಟ್ರ ಪ್ರಜ್ಞೆ ೪೧
- ಡಾ. ಎಂ. ಎಸ್. ಮಾಗಣಗೇರಿ

೧೦. ಕನ್ನಡ ಕವಿತೆಗಳಲ್ಲಿ ರಾಷ್ಟ್ರೀಯತೆ ೫೦
- ಪ್ರೊ. ರಮೇಶ ಮ. ಕಲ್ಲನಗೌಡರ

# ಬಸವರಾಜ ಕಟ್ಟೀಮನಿಯವರ ಕಥೆಗಳು ಮತ್ತು ರಾಷ್ಟ್ರ ಪ್ರಜ್ಞೆ

• ಡಾ.ಎಂ.ಎಸ್.ಮಾಗಣಗೇರಿ

ಸ್ವಾತಂತ್ರ್ಯ ಚಳುವಳಿಯ ವಸ್ತುವನ್ನುಳ್ಳ ಕಟ್ಟೀಮನಿಯವರ ಕಥೆಗಳು ಗಮನಾರ್ಹವಾಗಿದೆ. ೧೯೪೭ರಲ್ಲಿ ಪ್ರಕಟವಾದ 'ಆಗಸ್ಟ್ ಒಂಭತ್ತು' ಕಥಾ ಸಂಕಲನದಲ್ಲಿ ಬರುವ ಎಲ್ಲ ಕಥೆಗಳೂ ದೇಶ ಪ್ರೇಮದ ಹಿನ್ನಲೆಯಲ್ಲಿ ರಚನೆಯಾಗಿ ಮಹತ್ವ ಪಡೆದಿವೆ. ದೇಶಪ್ರೇಮದ ಹುಮ್ಮಸ್ಸಿನಿಂದ ತಮ್ಮ ಜೀವನವನ್ನೇ ಪಣಕಿಟ್ಟು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರ ತ್ಯಾಗ, ಬಲಿದಾನ, ಹೋರಾಟದ ರೀತಿ ಅವರು ತೋರುವ ಮಾನವೀಯತೆ ಇವೆಲ್ಲ ಈ ಕಥೆಗಳಲ್ಲಿ ಚಿತ್ರಿತವಾದ ಬಗೆ ವಿನೂತನವಾದದ್ದು. ಸ್ವಾತಂತ್ರ್ಯ ಸಮರದ ಮೈನವಿರೇಳಿಸುವ ಘಟನೆಗಳನ್ನಾಧರಿಸಿದ ಈ ಕಥೆಗಳು ದೇಶಕ್ಕಾಗಿ ಪ್ರಾಣತೆತ್ತ ಹುತಾತ್ಮರ ಸ್ಮಾರಕದಂತಿವೆ. "ಆಗಸ್ಟ್ ಕ್ರಾಂತಿಯ ಪ್ರಚಂಡ ಬಿರುಗಾಳಿಗೆ ಸಿಲುಕಿ ಆರ್ಥಿಕ ತೊಂದರೆಗಳಿಗೆ ಕಟ್ಟುಬಿದ್ದು, ಸಾಯುವ ಸ್ಥಿತಿಗೆ ಬಂದರೂ ಸೋತುಹೋಗದೇ ತನ್ನ ಉಜ್ವಲ ವ್ಯಕ್ತಿತ್ವವನ್ನು ಕಾಯ್ದುಕೊಂಡು ತಲೆಯೆತ್ತಿ ನಿಂತ ಧೀರ ಭಾರತೀಯನ ಚಿತ್ರ ಆಗಸ್ಟ್ ಒಂಭತ್ತು" ಸ್ವಾತಂತ್ರ್ಯ ಚಳುವಳಿಯ ಮಹಾಸಮರದಲ್ಲಿ ಧುಮುಕಿ ವೈರಿಗಳ ವಶವಾಗಿ ಸೆರೆಮನೆಯಲ್ಲಿರುವ ಕಥಾ ನಾಯಕ ವಿಶ್ವನಾಥ ಅಪ್ಪಟ ದೇಶಪ್ರೇಮಿ. ಈತನ ಪತ್ನಿ ಜಯಾ ಸಮಾಜದಲ್ಲಿ ಅನುಭವಿಸುವ ಏಕಾಕೀತನ, ವಿರಹ ವೇದನೆ, ಕಿತ್ತು ತಿನ್ನುವ ಬಡತನ, ಅಸಹಾಯಕತೆ ಜೊತೆಗೆ ಕಾಮುಕರ ವಕ್ರದೃಷ್ಟಿಯಿಂದ ನೊಂದುಕೊಳ್ಳುತ್ತಾಳೆ. ಆದರೂ ತನ್ನ ಛಲ ಬಿಡದ ಛಲಗಾತಿ ಹಣದಾಸೆಗೆ ತನ್ನ ಶೀಲವನ್ನು ಮಾರಿಕೊಳ್ಳದೇ ಪತಿಯ ಪವಿತ್ರ ದೇಶಪ್ರೇಮ ಹಾಗೂ ತನ್ನ ಮಗ ಚಂದ್ರುವಿನ ಕನವರಿಕೆಯಲ್ಲಿ ಹೊತ್ತಿ ಉರಿಯುವ ದೇಶಾಭಿಮಾನದ ಪ್ರಭಾವದಿಂದ ಪರಿಶುದ್ಧ ಭಾರತ ನಾರಿಯಾಗಿ ಉಳಿದ ಸಾಧ್ವಿ ಶಿರೋಮಣಿಯೊಬ್ಬಳ ಕಥೆ ಇದಾಗಿದೆ. ಕಥಾನಾಯಕಿ ಜಯಾಳ ಮನಸ್ಸಿನ ತುಮುಲ ಹಾಗೂ ವಸ್ತುಸ್ಥಿತಿಯ ಅರಿವಾಗುತ್ತಲೂ ಹೊಯ್ದಾಡುವ ಅವಳ ಹೃದಯಕ್ಕೆ ಎರಡು ಪ್ರಸಂಗಗಳು ಕಾರಣವಾಗುತ್ತವೆ. ತನ್ನ ಪತಿ ಕಾರಾಗೃಹದಲ್ಲಿದ್ದು ಗತಕಾಲದ ಬದುಕಿನ ನೆನಪು

'ವಿವಿಧತೆಯಲ್ಲಿ ಏಕತೆ' ಯನ್ನು ಹೊಂದಿದ ಪ್ರಪಂಚದ ಏಕೈಕ ರಾಷ್ಟ್ರ ಭಾರತ. ಹಲವು ಭಾಷೆ, ಜಾತಿ, ಹಲವಾರು ಧರ್ಮ, ಹಲವಾರು ನಂಬಿಕೆ – ಆಚರಣೆಗಳು, ವಿಭಿನ್ನ ಸಂಪನ್ಮೂಲಗಳಿಂದ ಕೂಡಿರುವುದು. ವಿಭಿನ್ನ ಸಂಪ್ರದಾಯ, ಆಚರಣೆಗಳಿಂದ ಪ್ರಾದೇಶಿಕವಾಗಿ ವ್ಯತ್ಯಾಸಗಳನ್ನು ಹೊಂದಿರುವುದು. ಆದರೆ ಸಮಗ್ರತೆ ಮತ್ತು ಸಮನ್ವಯತೆಯನ್ನು ಸಾಧಿಸಿಕೊಂಡಿದೆ. ಇದನ್ನೇ ಬಹುಮುಖಿ ಸಂಸ್ಕೃತಿಯ ಒಮ್ಮತದ ಪರಿಕಲ್ಪನೆ ಎನ್ನಬಹುದು. ಈ ಒಮ್ಮತ – ಏಕತೆ – ಸಹಬಾಳ್ವೆಯನ್ನೆ ನಾವು ರಾಷ್ಟ್ರೀಯತೆ ಎಂದು ಭಾರತದ ಸಂದರ್ಭದಲ್ಲಿ ಅರ್ಥೈಸಿಕೊಳ್ಳಬೇಕು. ಹೀಗೆ ಅರ್ಥೈಸಿಕೊಳ್ಳುವುದರೊಂದಿಗೆ ಆ ನಿಟ್ಟಿನಲ್ಲಿ ಬದುಕಬೇಕಾಗಿದೆ. ನಮ್ಮ ಪೂರ್ವಜರು ಸಹಬಾಳ್ವೆಗೆ – ಸಹಕಾರಕ್ಕೆ ಸರ್ವಧರ್ಮ ಸಮಷ್ಠಿ ಪ್ರಜ್ಞೆಗೆ ಸಾಕ್ಷಿಯಾಗಿದ್ದಾರೆ. ಇದನ್ನೆ ನಾವು ದೇಶ ಭಕ್ತಿಯ ಸಂದರ್ಭದಲ್ಲಿ ಬೇರು ಸಂಸ್ಕೃತಿ, ನೆಲ ಸಂಸ್ಕೃತಿ, ಪರಂಪರೆ, ಸಾಂಪ್ರದಾಯಿಕತೆ ಎನ್ನುತ್ತೇವೆ. ಇಂತಹ ರಾಷ್ಟ್ರೀಯತೆ ಮತ್ತು ಮಾಧ್ಯಮಗಳ ಕುರಿತು ವಿದ್ವತ್ಪೂರ್ಣ ಲೇಖನಗಳ ಸಂಕಲನ ಇದಾಗಿದ್ದು. ಓದುಗರಿಗೆ ಹೊಸ ಹೊಳಹುಗಳನ್ನು ಮೂಡಿಸುತ್ತವೆ.

ದೆಹಲಿ ವಿಶ್ವವಿದ್ಯಾಲಯದ ಪಿ.ಜಿ.ಡಿ.ಎ.ವಿ. ಕಾಲೇಜಿನಲ್ಲಿ "ಪ್ರಸಾರ ಮಾಧ್ಯಮಗಳು ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಎಷ್ಟೊಂದು ಯಶಸ್ವಿಯಾಗುತ್ತಿದೆ? ಆಗಬೇಕು" ಎಂಬುದನ್ನು ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿರುವುದರ ಪ್ರತಿಫಲವೇ ಈ ಸಂಕಲನ ಕೃತಿ ಪ್ರಕಟವಾಗಿದೆ. ೨೬ ಮತ್ತು ೨೭–೦೪–೨೦೧೮ ರಂದು 'ಮಾಧ್ಯಮ, ಸಾಹಿತ್ಯ–ರಾಷ್ಟ್ರೀಯತೆ' ಎಂಬ ವಿಷಯದ ಮೇಲೆ ಎರಡು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಿ ಅಲ್ಲಿ ಮಂಡಿಸಿ, ಆಯ್ಕೆಯಾದ ಪ್ರಬಂಧಗಳನ್ನು **'ಪತ್ರಿಕೋದ್ಯಮ, ಸಾಹಿತ್ಯ ಹಾಗೂ ರಾಷ್ಟ್ರೀಯತೆ'** ಎಂಬ ಕೃತಿಯನ್ನು ಸಂಕಲಿಸಿ, ತುಂಬಾ ಅರ್ಥಪೂರ್ಣವಾಗಿ ಹಾಗೂ ಶಿಸ್ತು ಬದ್ಧವಾಗಿ ಈ ಕೃತಿಯು ಸಂಪಾದಿತಗೊಳಿಸಿರುವರು. ಈ ಸಂಪಾದಿತ ಕೃತಿ ಸಾಹಿತ್ಯ ಲೋಕಕ್ಕೆ ಹೊಸ ಚಿಂತನೆಗಳು ಹಾಗೂ ಚರ್ಚೆಗಳೊಂದಿಗೆ ಸೇರ್ಪಡೆಯಾಗಿರುವುದು.

**ಡಾ. ಹರೀಶ ಅರೋಡಾ, ದೆಹಲಿ**

978-93-83813-40-7

ISBN 978-93-83813-40-7

ಸೌಮ್ಯ ಪ್ರಕಾಶನ, ವಿಜಯಪುರ